ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಡಿಪಾರ್ಟಮೆಂಟ್.

ಇನ್ಸ್ಟ್ರಾರ್‌ನಾಮೆ.

ನಂ. 836. ತಾರೀಖು 22ನೇ ಫಿಬ್ರವರಿ 1889.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂ [illegible] ರೆವಿನ್ಯೂ ಸರ್ವೆ ಸೆಟ್ಲಮೆಂಟ್ ಸ್ನ 1889ನೇ ಮೊಹ ಮಾರ್ಚಿ ತಾರೀಖು 2ರಲ್ಲಿ ಯಾ ಆಮುವಾರಿಗೆ ಪ್ರಾರಂಭಿಸಲ್ಪಡುತ್ತೆ.

ಸೂಪರ್‌ಟೆಂಡೆಂಟ್ ಮೈ [illegible] ಗ್ರಾಂಟ್,
ರೆವಿನ್ಯೂ ಸರ್ವೆ.

ಫೈನಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡರ್ಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎರ್ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಿಂದ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಹ್ಯೂಬ್ಲಿಕೇಟೂದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎರ್ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಜಡರ್ನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 116.

ಬೆಂಗಳೂರಿನಲ್ಲಿ ಇದ್ದು ಮದರಾಸಿನಲ್ಲಿ ಮೃತಪಟ್ಟ S. B. ರಂಗಸ್ವಾಮಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜಿದಾರಳು, ದೆರಂದೇವಮ್ಮ ಮೃತಪಟ್ಟ ಸದರಿ ರಂಗಸ್ವಾಮಯ್ಯಂಗಾರ್ರಿಗೆ ಪೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ದೆರಂದೇವಮ್ಮನು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ರಂಗಸ್ವಾಮಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ದೆರಂದೇವಮ್ಮನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ಮಿಮರ್ಕೆ ಮಾಡಲ್ಪಡುತ್ತೆ. ಆ ಕಾಲವನ್ನಲ್ಲಿ ಸದರೀ ಮೃತಪಟ್ಟ ರಂಗಸ್ವಾಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ಮಿಷ್ಟರೂ ಈ ಕೋರ್ಟಿನಲ್ಲಿ ಹಾಯರು ಆರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಫಿಬ್ರವರಿ ತಿಂಗಳು 20ನೇ ತಾರೀಖಿನಲ್ಲಿ ಕಾಮಿಷ್ಟೂಮೊಹರ್ ಮತ್ತು ನನ್ನ ದಸ್ತಖತ್ತೂಡನೆ ಕೊಡೋಣಾಗಿದೆ.

ಸಿ. ಕ್ರಿಸ್,
ಸಬ್ ಜಡ್ಜ್.

ತಾರೀಖು 11ನೇ ಫಿಬ್ರವರಿ 1889.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟ್ ಜಂಗಲ್‌ಗಳಲ್ಲಿ ಅಂದರೆ ಸರ್ಕಾರದ ಮತ್ತು ಫಾರೆಸ್ಟ್ ಇಲಾಖೇ ಸಂಬಂಧಪಟ್ಟ ಯಲ್ಲ ಜಂಗಲ್‌ಗಳಲ್ಲಿಯೂ 1889ನೇ ಇಸವಿ ಏಪ್ರೆಲ್ ಗುರ್ತೇ ಲಾಗಾಯತು 1892ನೇ ಇಸವಿ ಮಾರ್ಚಿ ಆಖೈರು ವರಗೆ ಆಗುವ ಮೂರು ಸಾಲಿಗಳಲ್ಲಿಯೂ ಲಾಕ್ (ಅರಗು) ರೂಪಿಸಲು ಪಬ್ಲಿಕ್ ಆಕ್ಷನ್ ಮೂಲಕ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1889ನೇ ಇಸವಿ ಮಾರ್ಚಿ ತಾರೀಖು 13ನೇ ಬುಧವಾರ ಬೆಳ್ಗೆ 12 ಘೆಂಟೆಗೆ ಮಾರಲ್ಪಡುತ್ತೆ.